ಡಿ.ಡಬ್ಲ್ಯು-4

ಸೋಮವಾರಪೇಟೆ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾ ದಂ ರವರ ನ್ಯಾಯಾಲಯದಲ್ಲಿ

ಒ ಎಸ್ ಃ **69/2016**

| | |
|---|---|
| ಸಾಕ್ಷಿದಾರರ ಹೆಸರುಃ | ಮಹದೇವಪ್ಪ.ವೈ.ಬಿ |
| ತಂದೆ ಹೆಸರುಃ | ಲೇಟ್ ಬಸವರಾಜಪ್ಪ |
| ವಯಸ್ಸುಃ | **52** |
| ವೃತ್ತಿಃ | ಗುತ್ತಿಗೆದಾರ |
| ವಾಸಸ್ಥಳಃ | ಸೋಮವಾರಪೇಟೆ. |

ಸಾಕ್ಷಿಯು ಕ್ರಮವಾಗಿ ಪ್ರಮಾಣಿಕರಿಸಿದ ದಿನಾಂಕಃ **04-03-2025**

ಮುಖ್ಯ ವಿಚಾರಣೆಃ ಶ್ರೀ. ಎನ್.ಸಿ.ಸಿ ವಕೀಲರಿಂದ

ನನಗೆ ಮನೋಹರ್ ರವರ ಪತ್ನಿ ಬಿ.ಎಂ.ಸರೋಜ ಗೊತ್ತಿದ್ದರು. ಅವರು ಮಾಡಿರುವ ಮೃತ್ಯು ಪತ್ರಕ್ಕೆ ನಾನು ಸಾಕ್ಷಿಯಾಗಿ ಸಹಿ ಮಾಡಿರುತ್ತೇನೆ. **2015** ರಲ್ಲಿ ಸದರಿ ಮೃತ್ಯು ಪತ್ರ ಆಗಿರುತ್ತದೆ. ಅದನ್ನು ನೋಡಿದರೆ ನಾನು ಗುರುತಿಸುತ್ತೇನೆ. ಸರೋಜ ರವರು ನನ್ನ ಮುಂದೆ ಸಹಿ ಮಾಡಿರುತ್ತಾರೆ. ನಾನು ಸಹಿ ಮಾಡುವಾಗ ಸಾಕ್ಷಿಯಾಗಿ ಷರತ್ ಎಂಬ ವಕೀಲರು ಇದ್ದರು. ವಿಲ್ ಅನ್ನು ಯಾರು ಬರೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅದನ್ನು ತಯಾರಿಸಿ ಕೊಂಡು ಉಪ ನೊಂದಣಾಧಿಕಾರಿ ಕಚೇರಿಗೆ ತಂದಿದ್ದರು. ಸಹಿಯನ್ನು ಉಪ ನೊಂದಣಾಧಿಕಾರಿ ಕಚೇರಿಯಲ್ಲಿ ಮಾಡಿರುತ್ತೇವೆ. ನಾನು ಸರೋಜಮ್ಮ ರವರು ಸಹಿ ಮಾಡಿರುವುದನ್ನು ನೋಡಿರುತ್ತೇನೆ. ನಾನು ಮತ್ತು ಷರತ್ ರವರು ಸಹಿ ಮಾಡಿರುವುದನ್ನು ಅವರು ನೋಡಿರುತ್ತಾರೆ. ನಿಡಿ **12** ಮೃತ್ಯು ಪತ್ರದಲ್ಲಿರುವ ಸರೋಜ ರವರ ಸಹಿಯನುನ ಈಗಾಗಲೇ ನಿಡಿ **12** ಈ ಎಂದು ಗುರುತಿಸಲಾಗಿರುತ್ತದೆ. ನನ್ನ ಸಹಿಯನ್ನು ನಿಡಿ **12** ಸಿ ಎಂದು ಗುರುತಿಸಲಾಗಿದೆ. ಷರತ್ ರವರ ಸಹಿಯನ್ನು ನಿಡಿ **12** ಬಿ ಎಂದು ಗುರುತಿಸಲಾಗಿದೆ. ಸರೋಜ ರವರ ಎಲ್ಲಾ ಪುಟಕ್ಕೂ ಸಹಿ ಮಾಡಿರುತ್ತಾರೆ. ಉಪ ನೊಂದಣಾಧಿಕಾರಿ ಕಚೇರಿಯಲ್ಲೂ ನನ್ನ ಸಹಿ ಪಡೆದಿರುತ್ತಾರೆ. ಸದರಿ ಸಹಿಯನ್ನು ನಿಡಿ **12** ಎಫ್ ಎಂದು ಗುರುತಿಸಲಾಯಿತು. ಸರೋಜಮ್ಮ ರವರು ಆರೋಗ್ಯ, ದೇಹ ಸ್ಥಿತಿ

ಮತ್ತು ಮಾನಸಿಕ ಸ್ಥಿತಿ ಚೆನ್ನಾಗಿತ್ತು. ಎನ್.ಡಿ. ಅರುಣ್ ವಕೀಲರು ನಮಗೆ ಓದಿ ಹೇಳಿದರು ಆಗ ಸರೋಜ ರವರು ಇದ್ದರು. ಸರೋಜ ರವರು ಸರಿ ಇದೆ ಎಂದಿರುತ್ತಾರೆ.

ಮುಖ್ಯ ವಿಚಾರಣೆ ಮುಕ್ತಾಯವಾಯಿತು.

ಪಾಟಿ ಸವಾಲುಃ ಶ್ರೀ. ಹೆಚ್.ಎಸ್.ಸಿ ವಕೀಲರಿಂದ

ಸಮಯ ಕೋರಿದ್ದು ನೀಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ).**

ಸಹಿ/-

**ಓ ಹೇ ಕೇ ಸರಿ ಇದೆ**

**ಪ್ರ ದ ನ್ಯಾ ದಂ ಸೋ ಪೇಟೆ**